# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

# कर्नाटक-संस्कृत-विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪ್ರ.ಸ/2016–17/2657-26 ದಿನಾಂಕ: 28.12.2016

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ಮೂವತ್ತೈದನೆಯ** ಸಭೆಯು ದಿನಾಂಕ: **28.12.2016ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ** ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Shilpa
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
560018.

ಇವರಿಗೆ,

1. **ಪ್ರೊ. ಕೆ.ಈ. ರಾಧಾಕೃಷ್ಣ,** # 6, ಆರ್.ಐ.ಇ.ಎಚ್.ಎಸ್. ಲೇಔಟ್, ಜೆ.ಸಿ. ನಗರ, ಮಹಾಲಕ್ಷ್ಮೀಪುರಂ, ಬೆಂಗಳೂರು – 560086.
2. **ಡಾ. ವನಿತಾ ರಾಮಸ್ವಾಮಿ,** ಎ–002, ಆದರ್ಶ ರೆಸಿಡೆನ್ಸಿ, 47ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು– 560070
3. **ವಿದ್ವಾನ್ ಕೆ. ಭೀಮಪ್ಪ,** ನಂ. 26, ಅಂಬೇಡ್ಕರ್ ಕಲ್ಯಾಣ ಮಂಟಪದ ಹತ್ತಿರ, ರಾಜೇಂದ್ರ ನಗರ, ಚಿತ್ರದುರ್ಗ ಜಿಲ್ಲೆ.
4. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ರಾಮಪುರ, ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
5. **ಪ್ರೊ. ಮೈಕೆಲ್,** ಸಂಸ್ಕೃತ ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಜ್ಞಾನಗಂಗಾ, ಕಲಬುರಗಿ–585106.
6. **ಶ್ರೀಮತಿ ಜಯಶ್ರೀ ವಿ. ಕೊರತಿ,** ಕೆನರಾ ವೆಲ್‌ಫೇರ್ ಟ್ರಸ್ಟ್ ಎಜುಕೇಷನ್ ಕಾಲೇಜು, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ – 581325
7. **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಂ. 136/1, ಶ್ರೀ ನೀಲಕಂಠಸ್ವಾಮಿ ಮಠ, ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು–570009
8. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – 581347
9. **ಡಾ. ಕೆ. ಸುಧಾಕರ್,** ನಂ. 346/347, 'ಪ್ರೇಮವಿಲ್ಲಾ', 14ನೇ ಮುಖ್ಯರಸ್ತೆ, ಆರ್.ಎಂ.ವಿ. ಬಡಾವಣೆ, ಸದಾಶಿವನಗರ, ಬೆಂಗಳೂರು – 560080.
10. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ಹೆಚ್ಎ–41, ಹಿಸ್‌ಗ್ರೇಸ್, ಬ್ಯಾರೀಸ್ ಅಪಾರ್ಟ್‌ಮೆಂಟ್ಸ್, ಮಾರ್ಟೀನ್ ಪಾಯಸ್ ರಸ್ತೆ, ಹ್ಯಾಟ್ ಹಿಲ್, ಮಂಗಳೂರು–575006
11. **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
12. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
13. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
14. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
15. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
16. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
17. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
18. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
19. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
20. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
21. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ 4. ರಕ್ಷತಾ ಪ್ರತಿ 5. ಜಾಲತಾಣಕ್ಕೆ ಅಳವಡಿಸಲು – ತುರ್ತು

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.


**೨೮.೧೨.೨೦೧೬ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೩೫ನೇ ಸಭೆಯ ನಡಾವಳಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೩೫ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಡಿಸೆಂಬರ್ ೨೮, ೨೦೧೬ರ ಬುಧವಾರ** ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ**, ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ**, ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೫. | **ಶ್ರೀಮತಿ ಜಯಶ್ರೀ ವಿ. ಕೊರತಿ**, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೬. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೭. | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**, ಮಾನ್ಯ ವಿಧಾನಪರಿಷತ್ ಸದಸ್ಯರು, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು<br>– ಇವರ ಪರವಾಗಿ **ಶ್ರೀಮತಿ ಮಂಜುಳಾ ಸಿ.ಎನ್.**, ಸಹಾಯಕ ನಿರ್ದೇಶಕರು | ಸದಸ್ಯರು |
| ೯. | **ಶ್ರೀಮತಿ ಎಂ. ಶಿಲ್ಪಾ, ಕ.ಆ.ಸೇ.**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಶ್ರೀ ಕೆ. ಭೀಮಪ್ಪ**, ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೨. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ**, ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೩. | **ಡಾ. ಮೈಕೆಲ್**, ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೪. | **ಡಾ. ಕೆ. ಸುಧಾಕರ್**, ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೫. | **ಅಪರ ಮುಖ್ಯ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೮. | **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 | ಸದಸ್ಯರು |
| ೯. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 | ಸದಸ್ಯರು |
| ೧೧. | **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 | ಸದಸ್ಯರು |
| ೧೨. | **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 | ಸದಸ್ಯರು |
| ೧೩. | **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 | ಸದಸ್ಯರು |
| ೧೪. | **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಸಚಿವರು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ)ರಾಗಿ ಸರ್ಕಾರದಿಂದ ಹೊಸದಾಗಿ ನೇಮಕಗೊಂಡಿರುವ ಕೆ.ಎ.ಎಸ್. ಹಿರಿಯ ಶ್ರೇಣಿ ಅಧಿಕಾರಿ ಶ್ರೀಮತಿ ಎಂ. ಶಿಲ್ಪಾ ಅವರನ್ನು ಮಾನ್ಯ ಕುಲಪತಿಗಳು ಸಭೆಗೆ ಪರಿಚಯಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| **ವಿಷಯ 01** | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 34ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 34ನೇ ಸಭೆಯು ದಿನಾಂಕ: 20.10.2016ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಪ್ರಶಾಸನ ಸಮಿತಿ 34ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |

| | | |
|---|---|---|
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **'ಪ್ರಶಿಕ್ಷಣ ಪರಿಷತ್ತಿ'ನ 18ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಪ್ರಶಿಕ್ಷಣ ಪರಿಷತ್ತಿ'ನ 18ನೇ ಸಭೆಯು ದಿನಾಂಕ: 18.10.2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **'ಪ್ರಶಿಕ್ಷಣ ಪರಿಷತ್ತಿ'ನ 18ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **'ಹಣಕಾಸು ಸಮಿತಿ' 23ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 23ನೇ ಸಭೆಯನ್ನು ದಿನಾಂಕ: 26.12.2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಈ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುವುದು. |
| | ನಿರ್ಣಯ | **'ಹಣಕಾಸು ಸಮಿತಿ' 23ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಾತಿಗೆ ಮಾನದಂಡಗಳನ್ನು ರೂಪಿಸುವ ಬಗೆಗೆ.**<br>ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24.09.2016ರಂದು ನಡೆದ ಸಭೆಯು ಯುಜಿಸಿಯ ನಿಯಮಾನುಸಾರ ಮಾನದಂಡಗಳನ್ನು ನಿಗದಿಪಡಿಸಿದೆ. ಅದನ್ನು ಅನುಮೋದಿಸಲು ಪ್ರಶಾಸನ ಸಮಿತಿ ಸಭೆಗೆ ಮಂಡಿಸಲಾಗಿದೆ. |
| | ನಿರ್ಣಯ | **ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಾತಿಗೆ ರೂಪಿಸಿರುವ ಮಾನದಂಡಗಳನ್ನು ಸಭೆಯು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ 2015-16ನೇ ಸಾಲಿನ ಆರ್ಥಿಕ ಲೆಕ್ಕಪರಿಶೋಧನೆಯ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2015-16ನೇ ಸಾಲಿನ ಲೆಕ್ಕಪರಿಶೋಧನೆಯು ಮುಗಿದಿದ್ದು, ಲೆಕ್ಕಪರಿಶೋಧಕರು ಲೆಕ್ಕಪತ್ರಗಳನ್ನು ಮರುವರ್ಗೀಕರಣ ಮಾಡಲು ಸೂಚಿಸಿರುವುದರಿಂದ ಮರುವರ್ಗೀಕರಣ ಮಾಡಿ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ ಮತ್ತು ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಲೆಕ್ಕಪತ್ರಗಳ ಮರುವರ್ಗೀಕರಣಗಳನ್ನು ಪರಿಶೀಲಿಸಿ ಅನುಮೋದಿಸಿತು. ಅನಂತರ, ಸರ್ಕಾರಿ ಲೆಕ್ಕಪರಿಶೋಧಕರು ನೀಡಿರುವ 2015-16ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿರುವ ಅನುಸರಣೆಗಳನ್ನು ಅಧ್ಯಕ್ಷರು ಸಭೆಗೆ ಮಂಡಿಸಿದರು. ಸಭೆಯು ಈ ವರದಿಯನ್ನು ಸಮಗ್ರವಾಗಿ ಪರಿಶೀಲಿಸಿತು ಹಾಗೂ ನಿಯಮಾನುಸಾರ ಮುದ್ರಿಸಿ, ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಯನ್ನು ನೀಡಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಮಾನ್ಯ ಕುಲಪತಿಗಳು ವಿದೇಶಿ ಪ್ರವಾಸ ಕೈಗೊಳ್ಳುತ್ತಿರುವ ಬಗೆಗೆ.**<br>ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಪದ್ಮಾಶೇಖರ್ ಅವರು ದಿನಾಂಕ: 29.12.2016ರಿಂದ 02.01.2017ರ ವರೆಗೆ ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸವನ್ನು ಕೈಗೊಳ್ಳುತ್ತಿದ್ದಾರೆ. ಇದು ಅವರ ವೈಯಕ್ತಿಕ ಪ್ರವಾಸವಾಗಿದ್ದು, ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ ಆರ್ಥಿಕ ಸೌಲಭ್ಯವನ್ನು ಪಡೆದುಕೊಳ್ಳುತ್ತಿಲ್ಲ. ಕುಲಪತಿಗಳು ವಿದೇಶಿ ಪ್ರವಾಸ ಕೈಗೊಳ್ಳುತ್ತಿರುವುದನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ. |
| | ನಿರ್ಣಯ | **ಕುಲಪತಿಗಳ ವೈಯಕ್ತಿಕ ವಿದೇಶ ಪ್ರವಾಸಕ್ಕೆ ಸಭೆಯು ಒಪ್ಪಿಗೆ ನೀಡಿತು ಹಾಗೂ ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ, ಹಿರಿಯ ಡೀನ್ ಅವರಿಗೆ ಕುಲಪತಿ ಹುದ್ದೆಯ ಪ್ರಭಾರವನ್ನು ವಹಿಸಿಕೊಡಲು ಸೂಚಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ವಿದುಷಿ ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ. -ಇವರು ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಬಗೆಗೆ.**<br>ವಿದುಷಿ ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ -ಇವರು ದಿನಾಂಕ: 26.12.2016ರಿಂದ 04.01.2017ರ ವರೆಗೆ ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದು, ತಮ್ಮ ವಿದೇಶ ಪ್ರವಾಸಕ್ಕೆ ಅನುಮತಿ ನೀಡುವಂತೆ ಮನವಿಯನ್ನು ಮಾಡಿರುತ್ತಾರೆ. ಘಟನೋತ್ತರ ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ. |
| | ನಿರ್ಣಯ | **ವಿದುಷಿ ಅನುಪಮಾ ಬಿ., ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ. -ಇವರು ವಿದೇಶ ಪ್ರವಾಸ ಕೈಗೊಳ್ಳುವುದಕ್ಕೆ ಸಭೆಯು ಅನುಮತಿ ನೀಡಿತು.** |

| | | |
|---|---|---|
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ –ಇಲ್ಲಿಗೆ ಪ್ರಭಾರ ನಿರ್ದೇಶಕರನ್ನು ನೇಮಿಸುವ ಬಗೆಗೆ.**<br>ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ –ಈ ಸಂಸ್ಥೆಯ ನಿರ್ದೇಶಕರ ಹುದ್ದೆಯು ಖಾಲಿ ಇದ್ದು, ದಿನಾಂಕ: 05.04.2016ರಂದು ನಡೆದ 'ಆಡಳಿತ ಮಂಡಳಿ' ಮೊದಲನೇ ಸಭೆಯು (ನಿರ್ಣಯ ಸಂಖ್ಯೆ: 09)– ಖಾಯಂ ನಿರ್ದೇಶಕರನ್ನು ನೇಮಕ ಮಾಡುವವರೆಗೆ 'ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' –ಇವರನ್ನು ಸಂಸ್ಥೆಯ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸಲು ಮಾನ್ಯ ಕುಲಪತಿಗಳಿಗೆ ಪೂರ್ಣ ಅಧಿಕಾರವನ್ನು ನೀಡಿತ್ತು. ಅದರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ)ರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ವೈ.ಎಸ್. ಸಿದ್ದೇಗೌಡ ಅವರನ್ನು ಸಂಸ್ಕೃತ ಸಂಶೋಧನ ಸಂಸತ್‌ನ ಪ್ರಭಾರ ನಿರ್ದೇಶಕರಾಗಿ ನೇಮಿಸಿ ಆದೇಶಿಸಲಾಗಿತ್ತು. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 494 ಯುಎನ್‌ಇ 2016 (ಭಾ–2); ದಿನಾಂಕ: 08.12.2016ರ ಅನ್ವಯ, ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್. (ಹಿರಿಯ ಶ್ರೇಣಿ), ಮುಖ್ಯ ಆಡಳಿತಾಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ ಇವರನ್ನು 'ಕುಲಸಚಿವರು (ಆಡಳಿತ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' –ಈ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಲಾಗಿದೆ ಹಾಗೂ ಪ್ರೊ. ವೈ.ಎಸ್. ಸಿದ್ದೇಗೌಡ –ಇವರ ಸೇವೆಯನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸಲಾಗಿದೆ. ಶ್ರೀಮತಿ ಎಂ. ಶಿಲ್ಪ ಅವರು ಕುಲಸಚಿವರ ಹುದ್ದೆಯ ಅಧಿಕ ಪ್ರಭಾರದಲ್ಲಿರುವುದರಿಂದ ಹಾಗೂ ಸಂಸ್ಕೃತ ಸಂಶೋಧನ ಸಂಸತ್‌ನ ದೈನಂದಿನ ಆಡಳಿತ ಕಾರ್ಯಗಳನ್ನು ಸುಗಮವಾಗಿ ನಡೆಸಬೇಕಾದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಡೀನರಾದ ಪ್ರೊ. ಶ್ರೀನಿವಾಸ ವರಖೇಡಿ ಅವರನ್ನು 'ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ' –ಈ ಸಂಸ್ಥೆಯ ತಾತ್ಕಾಲಿಕವಾಗಿ ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಬಹುದಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ವಿವರಗಳನ್ನು ಪರಿಶೀಲಿಸಿ, ಪ್ರೊ. ಶ್ರೀನಿವಾಸ ವರಖೇಡಿ ಅವರನ್ನು ತಾತ್ಕಾಲಿಕವಾಗಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಗೆ 'ಪ್ರಭಾರ ನಿರ್ದೇಶಕ'ರನ್ನಾಗಿ ನೇಮಿಸಲು ಅನುಮೋದನೆಯನ್ನು ನೀಡಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಿದ ಕೇಂದ್ರ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಸಹಾಯಕ ಸಿಬ್ಬಂದಿ ಹಾಗೂ 'ಡಿ' ಗ್ರೂಪ್ ನೌಕರರಿಗೆ ಗೌರವಧನವನ್ನು ನಿಗದಿಪಡಿಸುವ ಬಗೆಗೆ**<br>ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮೌಲ್ಯಮಾಪನ ಕಾರ್ಯಕ್ಕಾಗಿ ಒಂದು ಪತ್ರಿಕೆಗೆ ಮೌಲ್ಯಮಾಪನ ದರಗಳನ್ನು ಈಗಾಗಲೇ ನಿರ್ಧರಿಸಿದ್ದು, ಕೇಂದ್ರಾಧೀಕ್ಷಕರು, ಸಹಾಯಕ ಸಿಬ್ಬಂದಿ ಹಾಗೂ 'ಡಿ' ಗ್ರೂಪ್ ನೌಕರರಿಗೆ ಗೌರವಧನವನ್ನು ನೀಡುವ ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಂಡಿರುವುದಿಲ್ಲ. ಆದ ಕಾರಣ ಡಿಸೆಂಬರ್ 2016ನೇ ಸಾಲಿನಲ್ಲಿ ನಡೆಯಲಿರುವ ಮೌಲ್ಯಮಾಪನ ಕಾರ್ಯದಲ್ಲಿ ಕೇಂದ್ರ ಅಧೀಕ್ಷಕರಿಗೆ ಒಂದು ದಿನಕ್ಕೆ ರೂ. 750/– (ದಿನಭತ್ಯೆಯನ್ನು ಒಳಗೊಂಡಂತೆ), ಉಪ ಮುಖ್ಯ ಅಧೀಕ್ಷರಿಗೆ ಒಂದು ದಿನಕ್ಕೆ ರೂ. 600/– (ದಿನಭತ್ಯೆಯನ್ನು ಒಳಗೊಂಡಂತೆ), ಸಹಾಯಕ ಸಿಬ್ಬಂದಿಗೆ ಒಂದು ದಿನಕ್ಕೆ ರೂ. 300/– (ದಿನಭತ್ಯೆಯನ್ನು ಒಳಗೊಂಡಂತೆ) ಹಾಗೂ 'ಡಿ' ಗ್ರೂಪ್ ಸಿಬ್ಬಂದಿಗೆ ಒಂದು ದಿನಕ್ಕೆ ರೂ. 50/– (ದಿನಭತ್ಯೆಯನ್ನು ಒಳಗೊಂಡಂತೆ) ನಿಗದಿಪಡಿಸಿ ಮಾನ್ಯ ಕುಲಪತಿಗಳ ಒಪ್ಪಿಗೆಯಂತೆ ಕಛೇರಿ ಆದೇಶ ಹೊರಡಿಸಲಾಗಿದೆ. ಈ ಕಛೇರಿ ಆದೇಶದ ಘಟನೋತ್ತರ ಅನುಮೋದನೆಗಾಗಿ ಹಾಗೂ ಮುಂದಿನ ಎಲ್ಲಾ ಕೇಂದ್ರೀಕೃತ ಮೌಲ್ಯಮಾಪನ ಕಾರ್ಯಗಳಿಗೆ ಈ ದರಗಳು ಅನ್ವಯವಾಗುವಂತೆ ಅನುಮತಿ ನೀಡಲು ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **'ಗ್ರೂಪ್ ಡಿ' ಸಿಬ್ಬಂದಿಗೆ ರೂ. 100/– ನಿಗದಿಪಡಿಸಲು ಸಭೆಯು ಸೂಚಿಸಿತು. ಉಳಿದಂತೆ, ಕೇಂದ್ರ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳಿಗೆ ಇತರೆ ವಿಶ್ವವಿದ್ಯಾಲಯಗಳಲ್ಲಿ ನೀಡುತ್ತಿರುವ ಸಂಭಾವನೆಯ ವಿವರಗಳನ್ನು ಪರಿಶೀಲಿಸಿ, ದರವನ್ನು ನಿಗದಿಪಡಿಸಲು ಸಭೆಯು ನಿರ್ಣಯಿಸಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಿದ ಕೇಂದ್ರ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಸಹಾಯಕ ಸಿಬ್ಬಂದಿ ಹಾಗೂ 'ಡಿ' ಗ್ರೂಪ್ ನೌಕರರಿಗೆ ಗೌರವಧನವನ್ನು ನಿಗದಿಪಡಿಸುವ ಬಗೆಗೆ.**<br>ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಮೌಲ್ಯಮಾಪನ ಕಾರ್ಯಕ್ಕಾಗಿ ಒಂದು ಪತ್ರಿಕೆಗೆ ಮೌಲ್ಯಮಾಪನ ದರಗಳನ್ನು ಈಗಾಗಲೇ ನಿರ್ಧರಿಸಿದ್ದು, ಕೇಂದ್ರಾಧೀಕ್ಷಕರು, ಉಪ ಮುಖ್ಯಾಧೀಕ್ಷಕರು, ಸಹಾಯಕ ಸಿಬ್ಬಂದಿ ಹಾಗೂ 'ಡಿ' ಗ್ರೂಪ್ ನೌಕರರಿಗೆ ಗೌರವಧನವನ್ನು ನೀಡುವ ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಂಡಿರುವುದಿಲ್ಲ. ಆದ ಕಾರಣ ಮಾರ್ಚ್ 2017ನೇ ಸಾಲಿನಲ್ಲಿ ನಡೆಯಲಿರುವ ಮೌಲ್ಯಮಾಪನ ಕಾರ್ಯದಲ್ಲಿ ಕೇಂದ್ರ ಅಧೀಕ್ಷಕರಿಗೆ ಒಂದು ದಿನಕ್ಕೆ ರೂ. 500/– (ದಿನಭತ್ಯೆಯನ್ನು ಒಳಗೊಂಡಂತೆ) ಉಪ ಮುಖ್ಯ ಅಧೀಕ್ಷಕರಿಗೆ ಒಂದು ದಿನಕ್ಕೆ ರೂ. 350/– (ದಿನಭತ್ಯೆಯನ್ನು ಒಳಗೊಂಡಂತೆ) ಸಹಾಯಕ |

| | | |
|---|---|---|
| | | ಸಿಬ್ಬಂದಿಗೆ ಒಂದು ದಿನಕ್ಕೆ ರೂ. 250/– (ದಿನಭತ್ಯೆಯನ್ನು ಒಳಗೊಂಡಂತೆ) ಹಾಗೂ 'ಡಿ'ಗ್ರೂಪ್ ಸಿಬ್ಬಂದಿಗೆ ಒಂದು ದಿನಕ್ಕೆ ರೂ. 50/– (ದಿನಭತ್ಯೆಯನ್ನು ಒಳಗೊಂಡಂತೆ) ನಿಗದಿಪಡಿಸಿ, ಮುಂದಿನ ಎಲ್ಲಾ ಕೇಂದ್ರೀಕೃತ ಮೌಲ್ಯಮಾಪನ ಕಾರ್ಯಗಳಿಗೆ ಈ ದರಗಳು ಅನ್ವಯವಾಗುವಂತೆ ಅನುಮತಿ ನೀಡಲು ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **'ಗ್ರೂಪ್ ಡಿ' ಸಿಬ್ಬಂದಿಗೆ ರೂ. 100/– ನಿಗದಿಪಡಿಸಲು ಸಭೆಯು ಸೂಚಿಸಿತು. ಉಳಿದಂತೆ, ಕೇಂದ್ರ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯು ನೀಡುತ್ತಿರುವ ಸಂಭಾವನೆಯ ವಿವರಗಳನ್ನು ಪರಿಶೀಲಿಸಿ, ದರವನ್ನು ನಿಗದಿಪಡಿಸಲು ಸಭೆಯು ನಿರ್ಣಯಿಸಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾ ನಿಯಂತ್ರಕರ ಕರ್ತವ್ಯ ಹಾಗೂ ಹಕ್ಕುಗಳ ಬಗೆಗೆ.**<br>ಇತರೆ ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕವಾಗಿ ಪರೀಕ್ಷಾ ವಿಭಾಗಕ್ಕೆ ಪರೀಕ್ಷಾ ನಿಯಂತ್ರಕರು/ ಮೌಲ್ಯಮಾಪನ ಕುಲಸಚಿವರು ನೇಮಕಗೊಂಡು ನೇರವಾಗಿ ಕುಲಪತಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ನಿಯಂತ್ರಕರು ಎಂಬ ಹುದ್ದೆ ಇಲ್ಲದಿದ್ದರು, ಪರೀಕ್ಷಾ ಕಾರ್ಯಗಳು ಹೆಚ್ಚಾಗಿರುವ ಕಾರಣ ಪ್ರಶಾಸನ ಸಮಿತಿಯ ಅನುಮತಿ ಪಡೆದು ಪರೀಕ್ಷಾ ನಿಯಂತ್ರಕರಾಗಿ ಕಾರ್ಯನಿರ್ವಹಿಸಲು ಅಧ್ಯಾಪಕ ವರ್ಗದಲ್ಲಿ ಒಬ್ಬರನ್ನು ಮಾನ್ಯ ಹಿಂದಿನ ಕುಲಪತಿಗಳು ಫೆಬ್ರವರಿ 2015ರಲ್ಲಿ ಆದೇಶಿಸಿರುತ್ತಾರೆ. ಪರೀಕ್ಷಾ ನಿಯಂತ್ರಕರಾಗಿ ಆದೇಶಿಸಲ್ಪಟ್ಟವರು ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಇತರೆ ವಿಶ್ವವಿದ್ಯಾಲಯಗಳಂತೆ ನೇರವಾಗಿ ಕುಲಪತಿಗಳ ಅಧೀನದಲ್ಲಿ ಕಾರ್ಯನಿರ್ವಹಿಸಲು ಪ್ರಶಾಸನ ಸಮಿತಿಯ ಅನುಮತಿ ಕೋರಿದೆ. |
| | ನಿರ್ಣಯ | **ಕುಲಸಚಿವರ ಮೂಲಕವೇ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವಂತೆ ಸಭೆಯು ನಿರ್ದೇಶಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾಂಗ ವಿಭಾಗಕ್ಕೆ ಪ್ರತ್ಯೇಕವಾದ ಸಾದಿಲ್ವಾರು ಹಣವನ್ನು ಮಂಜೂರು ಮಾಡುವ ಬಗೆಗೆ.**<br>ಪರೀಕ್ಷಾಂಗ ವಿಭಾಗದಲ್ಲಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ಕಾಲೇಜುಗಳ ಹಾಗೂ ಪಾಠಶಾಲೆಗಳ ಪತ್ರವ್ಯವಹಾರಗಳಿಗೆ ಅಂಚೆ ವೆಚ್ಚ ಮತ್ತು ತುರ್ತು ಸಮಯದಲ್ಲಿ, ಕೇಂದ್ರೀಕೃತ ಮೌಲ್ಯಮಾಪನ ಕಾರ್ಯಗಳಿಗೆ ಮತ್ತು ಕೇಂದ್ರೀಕೃತ ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಗಳ ಸಂದರ್ಭಗಳಲ್ಲಿ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಪರೀಕ್ಷಾಂಗಕ್ಕೆ ಪ್ರತ್ಯೇಕವಾದ ಸಾದಿಲ್ವಾರು ಹಣದ ಅವಶ್ಯಕತೆ ಇರುವುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. |
| | ನಿರ್ಣಯ | **ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಸಾದಿಲ್ವಾರು ವೆಚ್ಚವನ್ನು ಕುಲಸಚಿವರ ಕಛೇರಿಯ ಸಾದಿಲ್ವಾರು ಮೊತ್ತದಲ್ಲಿ ಪಡೆಯಲು ಸಭೆಯು ಸೂಚಿಸಿತು ಹಾಗೂ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರ ಕಛೇರಿಯ ಸಾದಿಲ್ವಾರು ವೆಚ್ಚದ ಮಿತಿಯನ್ನು ರೂ. 10,000/–(ಹತ್ತು ಸಾವಿರ ರೂಪಾಯಿ)ಗಳಿಗೆ ಹೆಚ್ಚಿಸಲು ಸಭೆಯು ಅನುಮೋದಿಸಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಶಾಂಡಿಲ್ಯ ಇನ್ಫೋಟೆಕ್ ಪ್ರೈ. ಲಿ. ಸಂಸ್ಥೆಯಿಂದ ಹಣಕಾಸು ವಿಭಾಗಕ್ಕೆ ನೇಮಕ ಮಾಡಿಕೊಂಡಿರುವ ತಜ್ಞ ಸಿಬ್ಬಂದಿಯನ್ನು ಮುಂದುವರೆಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ದಿನಾಂಕ: 30.05.2015ರಂದು ನಡೆದ ಪ್ರಶಾಸನ ಸಮಿತಿ 26ನೇ ಸಭೆಯ ಅನುಮೋದನೆಯಂತೆ, ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಶಾಂಡಿಲ್ಯ ಇನ್ಫೋಟೆಕ್ ಪ್ರೈ.ಲಿ. ಸಂಸ್ಥೆಯಿಂದ ತಜ್ಞ ಸಿಬ್ಬಂದಿಯನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲಾಗಿದ್ದು, ಇವರ ಒಪ್ಪಂದದ ಅವಧಿಯು ಏಪ್ರಿಲ್ 2016ಕ್ಕೆ ಮುಕ್ತಾಯವಾಗಿದೆ. ಇವರ ನೇಮಕವನ್ನು ಮುಂದುವರೆಸಲಾಗಿದ್ದು, ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಹಣಕಾಸು ವಿಭಾಗಕ್ಕೆ ನೇಮಕ ಮಾಡಿಕೊಂಡಿರುವ ತಜ್ಞ ಸಿಬ್ಬಂದಿಯನ್ನು ಮುಂದುವರೆಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಿತು.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **ಭಾರತ ಸರ್ಕಾರದ ಆದೇಶ ಸಂಖ್ಯೆ: BC/16014/ 1/82 SC and BCD-I; Dt. 06.08.1984ರ ಆದೇಶವನ್ನು ಪಾಲಿಸುವ ಬಗೆಗೆ.**<br>ಕರ್ನಾಟಕ ಎಸ್.ಸಿ, ಎಸ್.ಟಿ ಪದವೀಧರರ ಒಕ್ಕೂಟದವರು 'ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ' –ಇವರಿಗೆ ಪತ್ರ ನೀಡಿ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಪ.ಜಾತಿ ಮತ್ತು ಪ.ಪಂಗಡದವರಿಗೆ ಮೀಸಲಾದ ಹುದ್ದೆಗಳನ್ನು ಭಾರತ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಬೇರೆ ರಾಜ್ಯಗಳಿಂದ ಬಂದಿರುವ ಪ.ಜಾತಿ/ ಪ.ಪಂಗಡದವರಿಗೆ ನೀಡುತ್ತಿರುವ ಬಗ್ಗೆ ದೂರಿರುತ್ತಾರೆ. ಭಾರತ ಸರ್ಕಾರದ ಆದೇಶ ಸಂಖ್ಯೆ: BC/16014/ 1/82 SC and BCD- I; Dt.06.08.1984ರ ಪ್ರಕಾರ ರಾಜ್ಯದಲ್ಲಿನ ಪ.ಜಾತಿ/ ಪ.ಪಂಗಡದವರಿಗೆ ಮೀಸಲಾದ ಹುದ್ದೆಗಳನ್ನು ಆಯಾ ರಾಜ್ಯದಲ್ಲಿ ಜನಿಸಿದ ಪ.ಜಾತಿ/ಪ.ಪಂಗಡದವರಿಗೆ ನೀಡಬೇಕಾಗಿರುತ್ತದೆ. ಈ ಬಗ್ಗೆ ಸರ್ಕಾರದ ಆದೇಶವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೇಮಕಾತಿಗಳಿಗೆ ಅಳವಡಿಸಿಕೊಳ್ಳುವುದಕ್ಕೆ ಅನುಮೋದನೆಯನ್ನು ಕೋರಿದೆ. |
| | ನಿರ್ಣಯ | **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |

| | | |
|---|---|---|
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **'ಡಿ' ಗ್ರೂಪ್ ನೌಕರರ ನೇಮಕಾತಿಗೆ ಶೈಕ್ಷಣಿಕ ಅರ್ಹತೆಯನ್ನು 7ನೇ ತರಗತಿಗೆ ಬದಲಾಗಿ 10ನೇ ತರಗತಿಗೆ ನಿಗದಿಪಡಿಸಿರುವ ಬಗೆಗೆ.**<br>ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 30 SRR 2013 Dt.06.01.2014ರ ಪ್ರಕಾರ Karnataka Civil Services (General Recruitment) (71st Amendment) Rules, 2013 ರಂತೆ 5ನೇ ನಿಯಮಕ್ಕೆ ತಿದ್ದುಪಡಿ ಮಾಡಿ ಡಿ–ಗ್ರೂಪ್ ನೌಕರರಿಗೆ ಶೈಕ್ಷಣಿಕ ಅರ್ಹತೆ 7ನೇ ತರಗತಿ ಇರುವುದನ್ನು 10ನೇ ತರಗತಿ ಎಂದು ತಿದ್ದುಪಡಿ ಮಾಡಿದ್ದು, ಇದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಿ ಮತ್ತು ಆರ್'ನಲ್ಲಿ ತಿದ್ದುಪಡಿಗೊಳಿಸಬೇಕಾಗಿದ್ದು, ನಿರ್ಣಯಕ್ಕಾಗಿ ಸಲ್ಲಿಸಿದೆ. |
| | ನಿರ್ಣಯ | **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 5ನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಗೌರವ ಡಿ.ಲಿಟ್ ನೀಡುವ ಬಗೆಗೆ.**<br>ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ: ಜಿಎಸ್ 2 ಜಿಯುಎಂ 2016; ದಿನಾಂಕ: 18.02.2016ರ ಅನ್ವಯ 'ಗೌರವ ಡಾಕ್ಟರೇಟ್' ಪ್ರದಾನಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿತ್ತು. ಅದರಂತೆ, ತಜ್ಞರ ಸಮಿತಿಯನ್ನು ರಚಿಸಲು ಈಗಾಗಲೇ ಘನತೆವೆತ್ತ ರಾಜ್ಯಪಾಲರ ಕಛೇರಿಗೆ ಪತ್ರ ಬರೆಯಲಾಗಿದೆ. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 11ನೇ ಸಾಮಾನ್ಯ ಸಭೆ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ 398 ಯುಆರ್‌ಸಿ 2014(3); ದಿನಾಂಕ: 19.02.2015ರ ಅನ್ವಯ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ಕರಡು ಪಟ್ಟಿಯನ್ನು ತಜ್ಞರ ಸಮಿತಿಯ ಮುಂದೆ ಮಂಡಿಸಿ, ಮೂರು ಜನಕ್ಕೆ ಸೀಮಿತವಾದ ಪಟ್ಟಿಯನ್ನು ಪಡೆದು, ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣ ಪರಿಷತ್ತಿನ ಸದಸ್ಯರಿಗೆ ಗೌರವ ಡಿ.ಲಿಟ್. ಪದವಿಗೆ ವಿದ್ವಾಂಸರ ಹೆಸರನ್ನು ಶಿಫಾರಸ್ಸು ಮಾಡಲು ಸೂಚಿಸಿದ್ದರು. ಅದರಂತೆ, ಮಾನ್ಯ ಸದಸ್ಯರುಗಳು ಈ ಕೆಳಗಿನಂತೆ ವಿವಿಧ ವಿದ್ವಾಂಸರ ಹೆಸರುಗಳನ್ನು ಶಿಫಾರಸ್ಸು ಮಾಡಿರುತ್ತಾರೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ.<br>1. ಶತಾವಧಾನಿ ಡಾ. ರಾ. ಗಣೇಶ್<br>2. ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ<br>3. ಡಾ. ಚೂಡಾಮಣಿ ನಂದಗೋಪಾಲ್<br>4. ಪ್ರೊ. ಎನ್.ಟಿ. ಶ್ರೀನಿವಾಸ ಅಯ್ಯಂಗಾರ್<br>5. ಡಾ. ಕೆಳದಿ ಗುಂಡಾ ಜೋಯಿಸ್<br>6. ಪ್ರೊ. ಕೆ. ರಾಜಗೋಪಾಲಾಚಾರ್ಯ<br>7. ಪ್ರೊ. ಕೆ. ಸೂರ್ಯನಾರಾಯಣರಾವ್<br>8. ಪ್ರೊ. ಹಯವದನ ಪುರಾಣಿಕ್<br>9. ವಿದ್ವಾನ್ ಬಿ. ರಾಜಶೇಖರಯ್ಯ<br>10. ಶ್ರೀ ಹೆಚ್. ಹನುಮಂತರಾಯ<br>11. ಶ್ರೀ ಷಣ್ಮುಖಯ್ಯ ಅಕ್ಕೂರಮಠ |
| | ನಿರ್ಣಯ | **ಗೌರವ ಡಿ.ಲಿಟ್ ಪದವಿಗೆ ಶಿಫಾರಸ್ಸುಗೊಂಡಿರುವ ವಿದ್ವಾಂಸರ ಪಟ್ಟಿಗೆ ಸಭೆಯು ಅನುಮೋದನೆಯನ್ನು ನೀಡಿತು. ಮುಂದಿನ ದಿನಗಳಲ್ಲಿ ಮಾರ್ಗದರ್ಶಿ ಸೂಚಿಯನ್ನು ರೂಪಿಸಿಕೊಳ್ಳುವಂತೆ ಸಭೆಯು ನಿರ್ಣಯಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಅನುದಾನಿತ ಸಂಸ್ಕೃತ ಪಾಠಶಾಲೆಗಳ ಪ.ಜಾ., ಪ.ಪಂ. ಹಾಗೂ ಪ್ರವರ್ಗ 1ರ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಸಂಸ್ಕೃತ ಪಾಠಶಾಲೆಗಳ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1ರ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ತರಗತಿಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **'ಸಂಸ್ಕೃತ ಗ್ರಂಥ ಪುರಸ್ಕಾರ–2015' ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಿಂದ 'ಗ್ರಂಥ ಪುರಸ್ಕಾರ' ಯೋಜನೆಯನ್ನು ಹಮ್ಮಿಕೊಂಡು, ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಈ ಪುರಸ್ಕಾರವು |

| | | |
|---|---|---|
| | | ಪ್ರಶಸ್ತಿ ಫಲಕ, ಶಾಲು ಮತ್ತು ರೂ. 10,000/- ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ, **'ಗ್ರಂಥ ಪುರಸ್ಕಾರ-2015'**ಕ್ಕೆ ಕೆಳಕಂಡ ವಾಙ್ಮಯ ಪ್ರಕಾರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಆಹ್ವಾನಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.<br>**ವಾಙ್ಮಯ ಪ್ರಕಾರಗಳು:**<br>1. ಸಂಸ್ಕೃತ ಕಾದಂಬರೀ / ಕಥಾಸಾಹಿತ್ಯ<br>2. ಸಂಸ್ಕೃತ ಗದ್ಯ / ಪದ್ಯ / ಕಾವ್ಯ / ನಾಟಕ ಸಾಹಿತ್ಯ<br>3. ಸಂಸ್ಕೃತ ಗ್ರಂಥ ಸಂಪಾದನಾ ಸಾಹಿತ್ಯ<br>4. ಸಂಸ್ಕೃತ ಪ್ರಬಂಧ ವಿಮರ್ಶನ ಸಾಹಿತ್ಯ / ವಿಜ್ಞಾನ ಸಾಹಿತ್ಯ<br>5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ<br>6. ಸಂಸ್ಕೃತ ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ<br>7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಎಚ್.ಡಿ.-ವಿದ್ಯಾವಾರಿಧಿ)<br>8. ಅತ್ಯುತ್ತಮ ಇಂಡಾಲಜಿ ವಿಮರ್ಶಗ್ರಂಥ ಅಥವಾ ಲೇಖನ ಸಂಗ್ರಹ<br>9. ಸಂಸ್ಕೃತ ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನ ಲೇಖನ (ಸುದೀರ್ಘ-ಕನಿಷ್ಠ 50 ಪುಟಗಳು)<br>10. ಶಿಕ್ಷಕರ ಅತ್ಯುತ್ತಮ ಸಂಸ್ಕೃತ ಸಂಶೋಧನಾ ಲೇಖನ |
| | ನಿರ್ಣಯ | **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |

**ಶ್ರೀಮತಿ ಎಂ. ಶಿಲ್ಪಾ**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್.**
ಅಧ್ಯಕ್ಷರು